International Journal of Kannada Research
www.kannadajournal.com

**ISSN: 2454–5813**
IJKR 2018; 4(3): 195-197
© 2018 IJKR
www.kannadajournal.com
Received: 02-05-2018
Accepted: 03-06-2018

**ಶ್ರೀರಾಮ ಎಂ**
ಸಹಾಯಕ ಪ್ರಾಧ್ಯಾಪಕರು,
ಬಿ.ಬಿ.ಎಂ, ವಿಭಾಗ,
ನ್ಯೂಹಾರಿಜನ್ ಕಾಲೇಜು,
ಮಾರತ್ತಹಳ್ಳಿ ರಿಂಗ್ ರೋಡ್,
ಬೆಂಗಳೂರು

**Correspondence**
**ಶ್ರೀರಾಮ ಎಂ**
ಸಹಾಯಕ ಪ್ರಾಧ್ಯಾಪಕರು,
ಬಿ.ಬಿ.ಎಂ, ವಿಭಾಗ,
ನ್ಯೂಹಾರಿಜನ್ ಕಾಲೇಜು,
ಮಾರತ್ತಹಳ್ಳಿ ರಿಂಗ್ ರೋಡ್,
ಬೆಂಗಳೂರು

# ಬಸವಣ್ಣನವರ ವಚನಗಳಲ್ಲಿ ಕಂಡುಬರುವ ಶಿವಭಕ್ತಿ, ಲೋಕನೀತಿ, ಹಾಗೂ ಆತ್ಮಾವಲೋಕನ

**ಶ್ರೀರಾಮ ಎಂ**

ಕ್ರಿ.ಶ. ೧೨ ನೇ ಶತಮಾನದಲ್ಲಿ ಜೀವಿಸಿದ್ದ ಬಸವಣ್ಣನವರು ರಾಜಕಾರಣಿಯೂ, ಶಿವಭಕ್ತರೂ, ಕವಿಯೂ, ಲೋಕೋ ದ್ಧಾರಕರೂ ಆಗಿದ್ದರು. ಕೂಡಲ ಸಂಗಮ ಕ್ಷೇತ್ರದಲ್ಲಿ ಶಿವಾನುಭವವನ್ನು ಹೊಂದಿ ಅಂತರಂಗದ ಭಕ್ತಿ ಭಾವಗಳನ್ನು ವಚನಗಳ ಮೂಲಕ ಪ್ರಕಟಿಸಿದರು. ಇವರು ಕಲ್ಯಾಣನಗರದ ಜನರ ಮೇಲೆ ತುಂಬ ಪ್ರಭಾವವನ್ನು ಬೀರಿದರು. ‘ಆ
ನು ಒಲಿದಂತೆ ಹಾಡುವೆ’ ಎಂದು ಬಸವಣ್ಣನವರು ತಮ್ಮ ವಚನಗಳಲ್ಲಿ ಆತ್ಮಾವಲೋಕನ, ಶಿವಭಕ್ತಿ, ಶಿವಸ್ತ್ರೋತ್ರ, ಲೋಕೋಪದೇಶ, ವೀರಶೈವ ಧರ್ಮಸಾರ, ಶಿವಾನುಭವ, ಶರಣರ ಬದುಕಿನ ಸ್ವರೂಪವೇ ಮೊದಲಾದ ಅಂಶಗಳ ನ್ನು ಪ್ರತಿಬಿಂಬಿಸಿದ್ದಾರೆ.

ಬಸವಣ್ಣನವರ ವಚನಗಳಲ್ಲಿ ಅವರ ಅಂತರಂಗದಲ್ಲಿ ಶಿವಭಕ್ತಿ ಅನುರಣಿತಗೊಂಡಿರುವುದರಿಂದ ಅವರನ್ನು ‘ಭಕ್ತಿ ಯೋಗಿ’ ಎನ್ನಲಾಗಿದೆ. ಭಕ್ತಿ ಭಂಡಾರಿ ಬಸವಣ್ಣ ಎಂದು ಇವರು ಖ್ಯಾತರಾಗಿದ್ದಾರೆ. ಏಕೆಂದರೆ ಬಿಜ್ಜಳ ರಾಜನ ಬ ಳಿ ಭಂಡಾರಿಯಾಗಿದ್ದ ಇವರು ಕಾಲಕ್ರಮೇಣ ಭಕ್ತಿ ಭಂಡಾರಿ ಎಂಬ ಅನ್ವರ್ಥನಾಮವನ್ನು ಪಡೆದುಕೊಂಡರು. ಶಿ
ವಭಕ್ತಿ ಸಾಧನೆಯಲ್ಲಿ ಕಂಡುಬರುವ ಏಳು-ಬೀಳುಗಳ ಸ್ವರೂಪವನ್ನೂ ಚಂಚಲ ಭಕ್ತರ ಮನಸ್ಸಿನ ಸ್ವರೂಪವನ್ನೂ, ಜನರ ಮೂಢನಂಬಿಕೆಯ ಆಳ-ಅಗಲಗಳನ್ನು, ಜಾತಿ, ಮತ, ಬೇಧಭಾವದ ನಿರಾಕರಣೆಯನ್ನು ವೀರಶೈವ ಧರ್ಮ ದ ವಿವರಗಳನ್ನು ಬಸವಣ್ಣನವರ ವಚನಗಳಲ್ಲಿ ಕಾಣುತ್ತೇವೆ. ಇವರ ವಚನಗಳೆಲ್ಲಾ ಆಡು ಮಾತಿನಲ್ಲಿವೆ. ಸರಳವಾದ ಭಾಷೆಯಲ್ಲಿ ನೇರವಾಗಿ ವಿಚಾರಗಳನ್ನು ನಿರೂಪಿಸುವುದು ಇವರ ದೃಷ್ಟಿಯಾಗಿತ್ತು. ಬಹು ಜನವುಳ್ಳ ಸಮಾಜವನ್ನು ಮೇಲೆತ್ತುವುದು ಇವರ ಗುರಿಯಾಗಿತ್ತು. ಮಾಲೋಪಮೆಯನ್ನು ಅರ್ಥಸ್ವಷ್ಟತೆಗೆ ಬಳಸಿಕೊಳ್ಳುವುದು. ಬಸವಣ್ಣನವರ ವಿಶೇಷತೆ ಎನ್ನಬಹುದು. ಅಲ್ಲಲ್ಲಿ ಪ್ರತಿಮಾ ವಿಧಾನದ ಮೂಲಕ ಧ್ವನಿ ರಮ್ಯವಾಗುವಂತೆ ವಚನಗಳನ್ನು ರಚಿಸುವು ದರಿಂದ ಇವರ ವಚನಗಳಲ್ಲಿ ಕಾವ್ಯಕ್ರಾಂತಿ ಹೊಳೆದಿದೆ.

ಈ ಲೋಕದಲ್ಲಿ ಅನೇಕ ವಿಷಯಗಳು ನಮ್ಮನ್ನು ‘ಸುಖ ಅನುಭವಿಸು’ ಎಂದು ಕೈಬೀಸಿ

ಕರೆಯುತ್ತಿರುತ್ತದೆ. ಇವುಗಳ ಸೆಳೆತದಿಂದ ಪಾರಾಗಿ ಕಾಣದ ಶಿವನನ್ನು ನಂಬಿ ಅವನ ಸ್ವರೂಪವನ್ನರಿತು ಶುದ್ಧ ಜೀವನವನ್ನು ನಡೆಸುತ್ತಾ 'ಕಾಯಕ ವೇ ಕೈಲಾಸ'ವೆಂಬ ಅನುಸಂಧಾನದಿಂದ 'ದಯವೇ ಧರ್ಮದ ಮೂಲವಯ್ಯ' ಎಂಬ ಅಚಲ ಶ್ರದ್ಧೆಯನ್ನು ಎಲ್ಲಾ ಕಾಲ ಗಳಲ್ಲೂ ಕಾಯ್ದು ಕೊಳ್ಳುವುದು ಅಗತ್ಯವೆಂದು ಬಸವಣ್ಣನವರು ಹೇಳಿದ್ದಾರೆ. 'ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ' ಎಂಬ ಅಂತರಂಗ ನಿರೀಕ್ಷೆಯ ವಿಶಿಷ್ಟತೆಯನ್ನು ವಿನಯತೆಯನ್ನು ಪ್ರದರ್ಶಿಸಿದ್ದಾರೆ. ನಿರ್ಮಲ ಮನಸ್ಸಿನ ಪ್ರಾಮಾಣಿಕ ಭಕ್ತಿ ಶ್ರದ್ಧೆಗಳನ್ನು ಜೀವನದಲ್ಲಿ ಒಳಗೊಂಡಿರುವ ಸರ್ವಸಮಾನತೆಯ ಭಾವವನ್ನು ತನ್ನ ಬದುಕಿನ ಉಸಿ ರಾಗಿಸಿಕೊಂಡು ಸಮಾಜದಲ್ಲಿ ರೂಢಮೂಲವಾಗಿ ಬೇರೂರಿದ್ದ ಜಾತಿ ವೈಷಮ್ಯಗಳನ್ನು ಮತ ಧರ್ಮಗಳ ಮೇಲು-ಕೀ ಳುಗಳನ್ನು ಹೋಗಲಾಡಿಸಲೂ ಪ್ರಯತ್ನ ಪಟ್ಟವರು ಬಸವಣ್ಣನವರ ವಚನಗಳಲ್ಲಿ 'ಬಹಿರಂಗ' ಶುದ್ಧಿಗಿಂತ 'ಅಂತರಂಗ' ಶುದ್ಧಿ ಮುಖ್ಯವೆಂದು, ಮನಸ್ಸು ಶುಚಿ-ರುಚಿಯಿಂದ ಕೂಡಿದ ಪರಿಪಕ್ವತೆಯಿರಬೇಕು ಎಂದಿದ್ದಾರೆ. ಎನ್ನ ಚಿತ್ತ ಅತ್ತಿಯ ಹಣ್ಣು ನೋಡಯ್ಯ, ಎನ್ನ ಮನದ ಮರ್ಕಟವ ಹೋಗಲಾಡಿಸಯ್ಯ, ಅಲಗನೆಕ್ಕುವ ಸೊಣಗನಂತೆ ಎನ್ನಮನ ಚಿತ್ತ ನಸು ಗುನ್ನಿ ಕಾಯಿ ಎಂಬ ಇತ್ಯಾದಿ ವಚನಗಳಲ್ಲಿ ಆತ್ಮೋದ್ಧಾರದ ನಿಲುವನ್ನು ಸಾದರಪಡಿಸುತ್ತದೆ.

ಪ್ರಪಂಚದಲ್ಲಿರುವ ನಾನಾ ಬಗೆಯ ಆಕರ್ಷಣೆಗಳ ಸೆಳೆತದಿಂದ ದೂರವಿರುವುದು ಸುಲಭ ಸಾಧ್ಯವಲ್ಲ. ಮನಸ್ಸನ್ನು ಲೋಕ ವಿಚಾರಗಳಿಂದ ದೂರ ಮಾಡಿ ಭಗವಂತನ ವಿಚಾರದ ಅರಿವಿನಿಂದ ಆನಂದ ಪಡೆಯುವಂತಹ ಸೌಭಾಗ್ಯ ವನ್ನು ಕರುಣಿಸಬೇಕೆಂದು ಬಸವಣ್ಣನವರು ಶಿವನನ್ನು ಪ್ರಾರ್ಥಿಸುತ್ತಾ, ಲೋಕದಲ್ಲಿ ಮನುಷ್ಯನನ್ನು ಭಗವಂತನ ಚಿಂತ ನೆಯನ್ನು ದೂರ ಮಾಡುವ ಆಕರ್ಷಣೀಯ ವಸ್ತುಗಳನ್ನು ದೂರ ಮಾಡುತ್ತಾ ವಿವೇಕವನ್ನು ಹೊಂದುವಂತೆ ಹೇಳಿದ್ದಾರೆ.

ವಿಷಯವೆಂಬ ಹಸುರನೆನ್ನ ಮುಂದೆ ತಂದು
ಪಸರಿಸಿದೆಯಯ್ಯ:
ಪಶುವೇನ ಬಲ್ಲದು ಹಸುರೆಂದೆಳಸುವುದು
ವಿಷಯ ರಹಿತ ಮಾಡಿ, ಭಕ್ತಿರಸವ ದಣಿಯ ಮೇಯಿಸಿ
ಸುಬುದ್ಧಿಯೆಂಬುದಕವನೆರೆದು ನೋಡಿ ಸಲಹಯ್ಯ
ಕೂಡಲಸಂಗಮದೇವ

ಈ ಸೆಳೆತದಿಂದ ಪಾರು ಮಾಡಬೇಕೆಂದೂ, ವಿಷಯ ರಹಿತನನ್ನಾಗಿ ಮಾಡಿ ಭಕ್ತಿ ರಸವನ್ನು ಮೇಯಿಸಿ ಸುಬುದ್ಧಿ ಎಂ ಬ ಉದಕವನ್ನೆರೆದು ಸಲಹಬೇಕೆಂದು ಬಸವಣ್ಣನವರು ಪ್ರಾರ್ಥಿಸಲು ಅವರ ಆತ್ಮಾವಲೋಕನವೇ ಕಾರಣವಾಗಿದೆ.

ಜನರು ತಮ್ಮನ್ನು ಬಂಧು-ಮಿತ್ರರು ಕಾಪಾಡುವರೆಂದು ಮಿತಿಮೀರಿ ನಂಬಿ ವರ್ತಿಸುವುದು ಸರಿಯಲ್ಲವೆಂಬುದು ಇ ವರ ವಾದ.

ಚಂದ್ರೋದಯಕ್ಕೆ ಅಂಬುಧಿ ಹೆಚ್ಚವುದಯ್ಯ
ಚಂದ್ರಕುಂದೆ ಕುಂದುವುದಯ್ಯ,
ಚಂದ್ರಂಗೆ ರಾಹು ಅಡ್ಡ ಬಂದಲ್ಲಿ
ಅಂಬುಧಿ ಬೊಬ್ಬಿಟ್ಟಿತ್ತೇ ಅಯ್ಯ?
ಅಂಬುಧಿಯ ಮುನಿ ಆಪೋಶನವ ಕೊಂಡಲ್ಲಿ
ಚಂದ್ರಮನಡ್ಡ ಬಂದನೇ ಅಯ್ಯ?
ಆರಿಗಾರೂ ಇಲ್ಲ, ಕೆಟ್ಟವರಿಗೆ ಕೆಳೆಯಿಲ್ಲ
ಜಗದ ನಂಟು ನೀನೇ ಅಯ್ಯ ಕೂಡಲಸಂಗಮದೇವ

ಆದ್ದರಿಂದ ಕಷ್ಟಗಳನ್ನು ನಿವಾರಣೆ ಮಾಡುವವನು ಶಿವನೊಬ್ಬನೇ ಎಂಬ ನಿಲುವನ್ನು ಪ್ರಕಟಿಸಿದ್ದಾರೆ.

ಶಿವನಲ್ಲದೆ ಬೇರೆ ಯಾರೂ ರಕ್ಷಿಸುವವರಿಲ್ಲ ಎನ್ನುವುದರೊಡನೆ ಶಿವನು ಶರಣರನ್ನು ರಕ್ಷಿಸಲು ಮನಸ್ಸು ಮಾಡಿದ್ದಾರೆ.

ಒಲೆ ಹತ್ತಿ ಉರಿದರೆ ನಿಲ ಬಹುದಲ್ಲದೆ
ಧರೆ ಹತ್ತಿ ಉರಿದರೆ ನಿಲ ಬಾರದು
ಏರಿ ಉರಿದರೆ ನಿಲ ಬಾರದು
ಏರಿ ನೀರುಂಬುಡೆ ಬೇಲಿ ಕೈಯ್ಯ ಮೇವಡೆ
ನಾರಿ ತನ್ನ ಮನೆಯಲ್ಲಿ ಕಳುವಡೆ
ತಾಯ ಮೊಲೆವಾಲು ನಂಜಾಗಿ ಕೊಲುವಡೆ
ಇನ್ನಾರಿಗೆ ದೂರುವೆ
ತಂದೆ ಕೂಡಲ ಸಂಗಮದೇವ
ನೀ ಹುಟ್ಟಿದ ಜೀವನ ಭವದುಃಖಿಯ ಮಾಡಿದ ಬಳಿಕ
ಬಿಡಿಸುವರಾರುಂಟು?

ಎಂದು ಹೇಳಿ ಶಿವನೊಬ್ಬನೇ ರಕ್ಷಿಸಬಲ್ಲವನೆಂಬುದನ್ನು ಬಸವಣ್ಣನವರು ಪ್ರಕಟಿಸಿದ್ದಾರೆ.

ಲೋಕದ ಜನರ ಡೊಂಕನ್ನು ತಿದ್ದಲು ಯತ್ನಿಸಿದ್ದಾರೆ.

ಭಾರತೀಯರು ಪುಣ್ಯನದಿಗಳಲ್ಲಿ ಸ್ನಾನ ಮಾಡುವುದು ಪುಣ್ಯಕರವೆಂದು ಭಾವಿಸುವ ಢಾಂಬಿಕರನ್ನು ವೈಚಾರಿಕತೆಯ ಮೂಲಕ ತಮ್ಮ ಅಭಿಪ್ರಾಯವನ್ನು ಪ್ರಕಟಿಸಿದ್ದಾರೆ.

ತೊರೆಯ ಮೀವ ಅಣ್ಣಗಳಿರಾ
ತೊರೆಯ ಮೀವ ಸ್ವಾಮಿಗಳಿರಾ
ತೊರೆಯಿಂ ಭೋ, ತೊರೆಯಿಂ ಭೀ!
ಪರನಾರಿಯ ಸಂಗಮ ತೊರೆಯಿಂ ಭೋ!
ಪರಧನದಾಮಿಷದ ತೊರೆಯಿಂ ಭೋ!
ಇವ ತೊರೆಯದೆ ಹೋಗಿ ತೊರೆಯ ಮಿಂದರೆ
ಬರುದೊರೆ ಹೋಹುದು ಕೂಡಲ ಸಂಗಮದೇವ

ಡಾಂಭಿಕತೆಯಿಂದ ದೂರವಾಗಿ ಶಿವಾರಾಧನೆ ಮಾಡಿದರೆ ಮಾತ್ರ ಶಿವ ಪ್ರಸಾದ ದೊರಕುವುದೆಂದು ಬಸವಣ್ಣನವರು ಲೋಕದ ಜನರಿಗೆ ಹಿತೋಪದೇಶಗೈದಿದ್ದಾರೆ. ಕೇವಲ ಇಷ್ಟಲಿಂಗಾಧಾರಣೆಯಿಂದ ಶರಣನ ಉದ್ಧಾರವಾಗದು: ಶಿವ ಪಥವನ್ನರಿಯಬೇಕೆಂಬುದನ್ನು ಬಸವಣ್ಣನವರು ಒತ್ತಿ ಹೇಳಿದ್ದಾರೆ.

ಶರಣನಾಗಿಯೂ ಶಿವ ಪಥವನ್ನರಿಯದಿದ್ದರೆ ಐಶ್ವರ್ಯವಂತರಿಗೆ ಆಯುಷ್ಯವಿಲ್ಲದಂತೆ ನಿರರ್ಥಕವೆಂದಿದ್ದಾರೆ. ಬಸವ ಣ್ಣನವರು ಬದುಕಿನಲ್ಲಿ ವೈಚಾರಿಕತೆಯನ್ನು ರೂಢಿಸಿಕೊಳ್ಳಬೇಕೆಂದೂ, ಮೂಢನಂಭಿಕೆಗೆ ಒಳಗಾಗಬಾರದೆಂದು ಒತ್ತಿ- ಒತ್ತಿ ಹೇಳಿದ್ದಾರೆ.

ಹಾವಾಡಿಗನು, ಮೂಕೊರತಿಯು ತನ್ನ ಮಗನ ಮದುವೆಗೆ
ಶಕುನವ ನೋಡ ಹೋಗುವಾಗ
ಇದಿರಲೊಬ್ಬ ಮೂಕೊರತಿಯ ಹಾವಾಡಿಗನ ಕಂಡು
ಶಕುನ ಹೊಲ್ಲವೆಂಬ ಚದುರನ ನೋಡು!
ತನ್ನ ಸತಿ ಮೂಕೊರತಿ, ತನ್ನ ಕೈಯಲು ಹಾವು!
ತಾನು ತನ್ನ ಭಿನ್ನವನರಿಯದೆ
ಅನ್ಯರನೇಂಬ ಕುನ್ನಿಯನೇನೆಂಬೆ ಕೂಡಲಸಂಗಮದೇವ

ಶಕುನ ಸರಿಯಾಗಿಲ್ಲವೆಂದು ಭಾವಿಸುವುದನ್ನು ವ್ಯಂಗ್ಯವಾಗಿ ಟೀಕಿಸಿ ತನ್ನಲ್ಲೇ ಸಂಕಷ್ಟ ದೋಷವಿರುವಾಗ ಅನ್ಯರ ದೋಷವನ್ನು ಎತ್ತಿ ಆಡುವುದು ತರವಲ್ಲವೆಂದು ತಿಳಿಸಿದ್ದಾರೆ. ಈ ಬಗೆಯ ಮೂಢನಂಬಿಕೆಯನ್ನು ದೂರ ಮಾಡಿಕೊಳ್ಳ ಬೇಕೆಂದಿದ್ದಾರೆ.

ಸತಿ-ಪತಿಗಳಿಬ್ಬರೂ ಶರಣಾಗುವುದು ಮುಖ್ಯವಲ್ಲವೆನ್ನುವ ಬಸವಣ್ಣನವರು ಒಬ್ಬಬ್ಬೊರು ಒಂದೊಂದು ದೇವತೆಯ ಆರಾಧನೆಗೆ ತೊಡಗಿದ್ದಾರೆ. ಒಬ್ಬರು ಶಿವನ ಪ್ರಸಾದವನ್ನು ಸ್ವೀಕರಿಸಿ ಮತ್ತೊಬ್ಬರ ಹೆಂಡ-ಮಾಂಸಗಳನ್ನು ತಿನ್ನುತ್ತಿದ್ದ ರೆ ಅಂತಹವರ ಭಕ್ತಿ ಶುದ್ಧವಾಗಿರಲಾರದೆಂದಿದ್ದಾರೆ, ಬದುಕಿನಲ್ಲಿ ಅಹಂಕಾರ, ಆಸೆಗಳನ್ನು ನೀಗಿಸಿಕೊಂಡು ಶಿವ ಭಕ್ತಿ ಯನ್ನು ತೋರಿದಾಗ ಮಾತ್ರ ಶರಣತ್ವ ಸಾರ್ಥಕವಾಗುವುದೆಂದೂ, ಸದ್ಗುಣವನ್ನು ಬಿತ್ತಿ ಬೆಳೆಯುವ ಬಗೆಯನ್ನು ತೋರ ಬೇಕೆಂದೂ ಬಸವಣ್ಣನವರು ಲೋಕದ ಜನರಿಗೆ ಕರೆ ನೀಡಿದ್ದಾರೆ. ಕಲ್ಲ ನಾಗರ ಪೂಜಿಸಿ ದಿಟದ ನಾಗರವನ್ನು ಕೊಲ್ಲುವ ದ್ವಂದ್ವಬೇಡವೆಂದಿದ್ದಾರೆ.

ಹೀಗೆ ಬಸವಣ್ಣನವರು ತಮ್ಮ ವಚನಗಳಲ್ಲಿ ಆತ್ಮಾವಲೋಕನ, ಲೋಕೋಪದೇಶ, ಭಕ್ತಿಯ ಬೆಳವಣಿಗೆಯ ಬಗೆಯನ್ನು ಕುರಿತು ಹಿತನುಡಿಗಳನ್ನಾಡಿದ್ದಾರೆ.